
# ಕರ್ನಾಟಕ ಜೀವವೈವಿಧ್ಯ ಮಂಡಳಿ

ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ
ಕರ್ನಾಟಕ ಸರ್ಕಾರ



## ಯುಎನ್‌ಇಪಿ–ಜಿಇಎಫ್–ಎಮ್‌ಒಇಎಫ್–ಎಬಿಎಸ್ ಯೋಜನೆ


"ಜೈವಿಕ ವೈವಿಧ್ಯ ಅಧಿನಿಯಮ 2002 ಮತ್ತು ನಿಯಮಗಳ ಅಡಿಯಲ್ಲಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆಯ(ಎಬಿಎಸ್) ಸಂಬಂಧಿತ ನಿಬಂಧನೆಗಳ ಜಾರಿ ಮತ್ತು ಸಾಮರ್ಥ್ಯ ವರ್ಧನೆ"




ಪರಿಸರವು ಮಾನವನ ಉಳಿವು ಮತ್ತು ಆರ್ಥಿಕ ಚಟುವಟಿಕೆಯ ಮೇಲೆ ಪರಿಣಾಮ ಬೀರುವ, ಜೀವವಿರುವ ಎಲ್ಲಾ ಪ್ರಭೇದಗಳ, ಹವಾಮಾನ ಮತ್ತು ನೈಸರ್ಗಿಕ ಸಂಪನ್ಮೂಲಗಳ ಪರಸ್ಪರ ವಿನಿಮಯವನ್ನು ಒಳಗೊಳ್ಳುತ್ತದೆ. ಆದ್ದರಿಂದ, ಇಂದಿನ ಪೀಳಿಗೆಯ ದುರಾಸೆಯಿಂದಾಗಿ ಮುಂದಿನ ಪೀಳಿಗೆಗಳ ಅಗತ್ಯಗಳನ್ನು ರಾಜಿ ಮಾಡಿಕೊಳ್ಳದಿರುವಂಥಾ ಅಭಿವೃದ್ಧಿಯಾಗಿರುವ ಸುಸ್ಥಿರ ಅಭಿವೃದ್ಧಿಯ ಮೂಲಕ ನಮ್ಮ ಪರಿಸರವನ್ನು ಸುರಕ್ಷಿತವಾಗಿಡುವುದು ಅತ್ಯಗತ್ಯವಾಗಿದೆ. 1992 ರಲ್ಲಿ, ಸುಸ್ಥಿರ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ, ಸಾಂಸ್ಥಿಕ ಚೌಕಟ್ಟಿನ ಮೂಲಕ ಪರಿಸರೀಯ ರಕ್ಷಣೆಯ ತುರ್ತು ಸಮಸ್ಯೆಗಳನ್ನು ಪರಿಹರಿಸಲು ಬ್ರೆಜಿಲ್‌ನ ರಿಯೋ–ಡಿ–ಜನೈರೋದಲ್ಲಿ ಮೊಟ್ಟಮೊದಲಿಗೆ, ಸಾಮಾನ್ಯವಾಗಿ ರಿಯೋ ಸಮ್ಮೇಳನ ಅಥವಾ ಭೂ ಶೃಂಗಸಭೆ ಎಂದು ಉಲ್ಲೇಖಿಸಲಾಗುವ, ಪರಿಸರ ಮತ್ತು ಅಭಿವೃದ್ಧಿಯ ಕುರಿತಾದ ವಿಶ್ವಸಂಸ್ಥೆ ಸಮ್ಮೇಳನವು (ಯುಎನ್‌ಸಿಇಡಿ) ನಡೆಯಿತು. ಇದು ಜೈವಿಕ ವೈವಿಧ್ಯದ ಕುರಿತ ಒಡಂಬಡಿಕೆಯ ಉದಯಕ್ಕೆ ಕಾರಣವಾಯಿತು.

## ಜೈವಿಕ ವೈವಿಧ್ಯದ ಕುರಿತ ಒಡಂಬಡಿಕೆ (ಸಿಬಿಡಿ)

ಜೈವಿಕ ವೈವಿಧ್ಯದ ಕುರಿತ ಒಡಂಬಡಿಕೆಯು (ಸಿಬಿಡಿ) ಸುಸ್ಥಿರ ಅಭಿವೃದ್ಧಿಯತ್ತ ವಿಶ್ವ ಸಮುದಾಯದ ಹೆಚ್ಚುತ್ತಿರುವ ಬದ್ಧತೆಯಿಂದ ಸ್ಫೂರ್ತಿ ಪಡೆಯಿತು. ಇದು ಸಾಮಾನ್ಯ ಮತ್ತು ವಿಶೇಷವಾಗಿ ತಳಿ ಸಂಪನ್ಮೂಲಗಳ ಜೈವಿಕ ವೈವಿಧ್ಯತೆಯ ಸಂರಕ್ಷಣೆಯ ಗಮನಾರ್ಹ ಹೆಜ್ಜೆಯನ್ನು ಪ್ರತಿನಿಧಿಸುತ್ತದೆ. ಈ ಒಡಂಬಡಿಕೆಯು ತನ್ನ ಸದಸ್ಯರಾಗಿ 196 ಒಪ್ಪಂದದ ಪಕ್ಷಗಳನ್ನು (ದೇಶಗಳನ್ನು) ಕಾನೂನುಬದ್ಧವಾಗಿ ಒಳಗೊಂಡ ಬಹುಪಕ್ಷೀಯ ಪರಿಸರೀಯ ಒಪ್ಪಂದವಾಗಿದೆ ಮತ್ತು ಇದು 29ನೇ ಡಿಸೆಂಬರ್ 1993ರಲ್ಲಿ ಜಾರಿಗೆ ಬಂದಿದೆ. ಇದು ಮೂರು ಮುಖ್ಯ ಉದ್ದೇಶಗಳನ್ನು ಒಳಗೊಂಡಿದೆ:



1. ಜೈವಿಕ ವೈವಿಧ್ಯತೆಯ ಸಂರಕ್ಷಣೆ;
2. ಜೈವಿಕ ವೈವಿಧ್ಯತೆಯ ಘಟಕಗಳ ಸುಸ್ಥಿರ ಬಳಕೆ;
3. ತಳಿ ಸಂಪನ್ಮೂಲಗಳ ಉಪಯೋಗದಿಂದ ಉಂಟಾಗುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಚಂಚಿಕೆ.

ಸಿಬಿಡಿ ಯು, ರಾಷ್ಟ್ರಗಳು ತಮ್ಮ ಜೈವಿಕ ಸಂಪನ್ಮೂಲಗಳ ಮೇಲೆ ಸಾರ್ವಭೌಮ ಹಕ್ಕುಗಳನ್ನು ಹೊಂದಿರುತ್ತವೆ ಎಂದು ಪುನರ್ ದೃಢೀಕರಿಸುತ್ತದೆ ಹಾಗೂ ರಾಷ್ಟ್ರೀಯ ಶಾಸನ ಮತ್ತು ಪರಸ್ಪರ ಒಪ್ಪಂದದ ನಿಯಮಗಳಿಗೆ (ಎಮ್‌ಎಟಿ) ಒಳಪಟ್ಟು ರಾಷ್ಟ್ರಗಳು ಬೇರೆ ಪಕ್ಷಗಳಿಗೆ ತಳಿ ಸಂಪನ್ಮೂಲಗಳ ಲಭ್ಯತೆಯನ್ನು ಒದಗಿಸಬಹುದು ಎಂದು ಕೋರುತ್ತದೆ. ಅಂತಹ ಜ್ಞಾನವನ್ನು ಹೊಂದಿರುವವರಿಂದ ಪಾರಂಪರಿಕ ಜ್ಞಾನ ಮತ್ತು ಆಚರಣೆಗಳ ಉಪಯೋಗದಿಂದ ಉಂಟಾಗುವ ಪ್ರಯೋಜನಗಳ ನ್ಯಾಯಸಮ್ಮತ ಹಂಚಿಕೆಯನ್ನು ಕೂಡಾ ಸಿಬಿಡಿ ಒದಗಿಸುತ್ತದೆ. ಇದರಿಂದಾಗಿ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯನ್ನು ಖಚಿತಗೊಳಿಸಲು ಅಂತಹ ಅವಕಾಶವನ್ನು ನಿರ್ಧರಿಸುವ ನಿಯಮಗಳಿಗಾಗಿ, ಅವಕಾಶವನ್ನು ಒದಗಿಸಲು ಚೌಕಟ್ಟನ್ನು ಹಾಕುವಂಥ ಸೂಕ್ತ ರಾಷ್ಟ್ರೀಯ ಶಾಸನವನ್ನು ತರುವುದು ಅನಿವಾರ್ಯವಾಯಿತು.



ಭಾರತವು ಸಿಬಿಡಿಯ ಒಂದು ಪಕ್ಷವಾಗಿದೆ ಹಾಗೂ ಒಡಂಬಡಿಕೆಯ ಅನುಸರಣೆಗಾಗಿ ಈ ಕೆಳಗಿನ ಕಾನೂನು ಚೌಕಟ್ಟುಗಳನ್ನು ಹಾಕಿಕೊಂಡಿದೆ.

1. ಜೈವಿಕ ವೈವಿಧ್ಯ ಅಧಿನಿಯಮ 2002
2. ಸಸ್ಯ ಪ್ರಭೇದಗಳ ಮತ್ತು ರೈತರ ಹಕ್ಕುಗಳ (ಪಿಪಿವಿಎಫ್ಆರ್) ರಕ್ಷಣೆ ಅಧಿನಿಯಮ, 2001
3. ಪೇಟೆಂಟ್ (ತಿದ್ದುಪಡಿ) ಅಧಿನಿಯಮ, 2002

## ನಗೋಯ ಶಿಷ್ಟಾಚಾರ

1992ರ ಸಿಬಿಡಿಯ ಮೂರು ಉದ್ದೇಶಗಳಲ್ಲಿ ಒಂದಾದ 'ತಳಿ ಸಂಪನ್ಮೂಲಗಳ ಮತ್ತು ಸಂಬಂಧಿಸಿದ ಪಾರಂಪರಿಕ ಜ್ಞಾನದ ಉಪಯೋಗದಿಂದ ಉಂಟಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆ'ಯನ್ನು ಅನುಷ್ಠಾನಗೊಳಿಸಲು ಬಳಕೆ ಮತ್ತು ಲಾಭ ಹಂಚಿಕೆಯನ್ನು ಕುರಿತ ನಗೋಯ ಶಿಷ್ಟಾಚಾರವು (ಎಬಿಎಸ್) ಒಂದು ಪೂರಕ ಒಪ್ಪಂದವಾಗಿದೆ. ಈ ಶಿಷ್ಟಾಚಾರವನ್ನು ಜಪಾನ್‌ನ ನಗೋಯದಲ್ಲಿ, 29ನೇ ಅಕ್ಟೋಬರ್, 2010ರಂದು ಮಾಡಲಾಯಿತು ಮತ್ತು ಇದು 12ನೇ ಅಕ್ಟೋಬರ್, 2014ರಂದು ಜಾರಿಗೆ ಬಂದಿತು. ಇದು ತಳಿ ಸಂಪನ್ಮೂಲಗಳನ್ನು ಪಡೆಯುವುದಕ್ಕೆ ಮತ್ತು ಅವುಗಳ ಉಪಯೋಗದಿಂದ ಬರುವ ಲಾಭಗಳನ್ನು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯ ಸಮ್ಮತವಾಗಿ ಹಂಚಿಕೊಳ್ಳುವುದಕ್ಕೆ ಸಂಬಂಧಿಸಿ ಮತ್ತು ಶಿಷ್ಟಾಚಾರದ ಅನುಸರಣೆಗಾಗಿ ಕ್ರಮ ಕೈಗೊಳ್ಳುವುದಕ್ಕೆ ತನ್ನ ಒಪ್ಪಂದದ ಪಕ್ಷಗಳನ್ನು ಬದ್ಧವಾಗಿಸುತ್ತದೆ.

## ಜೈವಿಕ ವೈವಿಧ್ಯ ಅಧಿನಿಯಮ, 2002

ಜೈವಿಕ ವೈವಿಧ್ಯ ಅಧಿನಿಯಮ, 2002ನ್ನು, 2002ರಲ್ಲಿ ಭಾರತ ಸಂಸತ್ತಿನಿಂದ ಜಾರಿಗೊಳಿಸಲಾಯಿತು ಹಾಗೂ ಇದು 5ನೇ ಫೆಬ್ರವರಿ 2003ರಿಂದ ಚಲಾವಣೆಗೆ ಬಂದಿತು ಮತ್ತು ದೇಶಾದ್ಯಂತ ಕಾರ್ಯಗತಗೊಳ್ಳುತ್ತಿದೆ. "ಜೈವಿಕ ವೈವಿಧ್ಯದ ಸಂರಕ್ಷಣೆ, ಅವುಗಳ ಘಟಕಗಳ ಸುಸ್ಥಿರ ಬಳಕೆ ಹಾಗೂ ಜೈವಿಕ ಸಂಪನ್ಮೂಲಗಳು ಮತ್ತು ಸಂಬಂಧಿತ ಜ್ಞಾನದ ವಾಣಿಜ್ಯ ಬಳಕೆಯಿಂದ ಉಂಟಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆ"ಗೆ ಅವಕಾಶವನ್ನು ಕಲ್ಪಿಸುವುದು ಈ ಕಾಯ್ದೆಯ ಉದ್ದೇಶಗಳಾಗಿವೆ. ಅಳವಡಿಸಿಕೊಳ್ಳಬೇಕಾಗಿರುವ ಕಾರ್ಯವಿಧಾನವನ್ನು ವಿವರಿಸಲು, 2004ರಲ್ಲಿ ಕೇಂದ್ರ ಸರ್ಕಾರದ ಜೈವಿಕ ವೈವಿಧ್ಯ ನಿಯಮಗಳನ್ನು ಅಧಿಸೂಚಿಸಲಾಯಿತು. ಕರ್ನಾಟಕ ರಾಜ್ಯದಲ್ಲಿ ಜೈವಿಕ ವೈವಿಧ್ಯ ಅಧಿನಿಯಮ 2002ರ ಅನುಷ್ಠಾನದ ಆದೇಶದೊಂದಿಗೆ 2003ರಲ್ಲಿ ಕರ್ನಾಟಕ ಜೀವ ವೈವಿಧ್ಯ ಮಂಡಳಿಯು ಸ್ಥಾಪನೆಯಾಯಿತು. ಕರ್ನಾಟಕ ಸರ್ಕಾರವು ಕಾಯ್ದೆಯ ಪ್ರಕರಣ 63ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳ ಪ್ರಕಾರ ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005ನ್ನು (29ನೇ ಜೂನ್, 2006ರಿಂದ ಜಾರಿಗೆ ಬರುವಂತೆ) ಅಧಿಸೂಚಿಸಿತು.

## ಅಧಿನಿಯಮದ ಪ್ರಮುಖ ಉಪಬಂಧಗಳು

ಸಂಶೋಧನೆಗಾಗಿ ಅಥವಾ ವಾಣಿಜ್ಯ ಬಳಕೆಗಾಗಿ ಜೈವಿಕ–ಸಂಪನ್ಮೂಲಗಳನ್ನು ಬಳಸುವವರು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದಿಂದ (ಎನ್‌ಬಿಎ) (ಭಾರತೀಯರಲ್ಲದವರು) ಮತ್ತು ರಾಜ್ಯ ಜೀವವೈವಿಧ್ಯ ಮಂಡಳಿಯಿಂದ (ಭಾರತೀಯರು) ಪೂರ್ವಾನುಮೋದನೆ ಪಡೆಯುವುದನ್ನು ಜೈವಿಕ ವೈವಿಧ್ಯ ಅಧಿನಿಯಮ, 2002ರ ಪ್ರಕರಣ 3 ಮತ್ತು 7 ಕಡ್ಡಾಯವಾಗಿಸುತ್ತವೆ.

**ಪ್ರಕರಣ 3:** ಭಾರತದಲ್ಲಿ ದೊರೆಯುವಂತಹ ಯಾವುದೇ ಜೈವಿಕ ಸಂಪನ್ಮೂಲ ಮತ್ತು/ಅಥವಾ ಸಂಬಂಧಿತ ಜ್ಞಾನವನ್ನು ಪಡೆಯಲು ಅಥವಾ ಯಾವುದೇ ಜೈವಿಕ ಸಂಪನ್ಮೂಲಗಳನ್ನು, ವಾಣಿಜ್ಯ ಬಳಕೆಗಾಗಿ, ಸಂಶೋಧನೆ ಅಥವಾ ಜೈವಿಕ–ಸಮೀಕ್ಷೆ ಮತ್ತು ಜೈವಿಕ–ಬಳಕೆಗಾಗಿ ಹೊಂದಲು ಬಯಸುವ ಯಾವುದೇ ವಿದೇಶೀ ಅಂಶವನ್ನು ಹೊಂದಿರುವ ಯಾವುದೇ ವ್ಯಕ್ತಿ ಅಥವಾ ಘಟಕವು ಅಂತಹ ಬಳಕೆ ಅಥವಾ ಲಾಭಗಳಿಗೆ ಮೊದಲೇ ಎನ್‌ಬಿಎಯಿಂದ ಪೂರ್ವಾನುಮೋದನೆಯನ್ನು ಕೋರತಕ್ಕದ್ದು.




**ಪ್ರಕರಣ 7 (ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳ ನಿಯಮ 15 ರೊಂದಿಗೆ ಓದಿ):** ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಬಳಕೆ ಅಥವಾ ಜೈವಿಕ – ಸಮೀಕ್ಷೆ ಅಥವಾ ಜೈವಿಕ – ಉಪಯೋಗಕ್ಕೆ ಅಥವಾ ವಾಣಿಜ್ಯ ಉಪಯೋಗಕ್ಕಾಗಿ ಅಥವಾ ಸಂಶೋಧನೆಗಾಗಿ ಪಡೆಯಲು ಅಥವಾ ಹೊಂದಲು ಈ ಮೊದಲಿನ ವರ್ಗದಲ್ಲಿ ಬರದಿರುವಂಥಾ ಯಾವುದೇ ಭಾರತೀಯ ವ್ಯಕ್ತಿ ಅಥವಾ ಘಟಕವು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ (ಕೆಬಿಬಿ) ಪೂರ್ವ ಸೂಚನೆಯನ್ನು ನೀಡಬೇಕು.

ಜೈವಿಕ ವೈವಿಧ್ಯ ಅಧಿನಿಯಮ, 2002, ಜೈವಿಕ ವೈವಿಧ್ಯ ನಿಯಮಗಳು, 2004 ಮತ್ತು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005 ಇವುಗಳನ್ನು ಇಲ್ಲಿಂದ ಪಡೆದುಕೊಳ್ಳಬಹುದು (ಡೌನ್‌ಲೋಡ್ ಮಾಡಿಕೊಳ್ಳಬಹುದು):

http://www.kbb.kar.nic.in/publications/KBB-English.pdf

## ಬಳಕೆ ಮತ್ತು ಲಾಭ ಹಂಚಿಕೆ (ಎಬಿಎಸ್)

ಬಳಕೆ ಮತ್ತು ಲಾಭ ಹಂಚಿಕೆಯು (ಎಬಿಎಸ್) ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಉಂಟಾಗುವ ಪ್ರಯೋಜನಗಳನ್ನು, ಜೈವಿಕ ಸಂಪನ್ಮೂಲದ ಸ್ಥಳೀಯ ಸಮುದಾಯ/ಪೂರೈಕೆ ದಾರರೊಂದಿಗೆ ಹಂಚಿಕೊಳ್ಳುವ ವಿಧಾನವನ್ನು ಸೂಚಿಸುತ್ತದೆ.

ವಾಣಿಜ್ಯ ಬಳಕೆಗಾಗಿ ಅಥವಾ ಸಂಶೋಧನೆಗಾಗಿ ಜೈವಿಕ–ಸಮೀಕ್ಷೆ ಮತ್ತು ಜೈವಿಕ ಸಂಪನ್ಮೂಲಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಪಾರಂಪರಿಕ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ, ಮತ್ತು ಜೈವಿಕ ಉಪಯೋಗದಿಂದ ಬರುವ ಲಾಭಗಳನ್ನು ನ್ಯಾಯಯುತವಾಗಿ ಹಾಗೂ ಸಮಾನವಾಗಿ ಹಂಚಿಕೊಳ್ಳುವುದಕ್ಕೆ ಸಂಬಂಧಿಸಿ ಮಾಡಿಕೊಂಡ ಒಪ್ಪಂದದಂತೆ ನಗೋಯ ಶಿಷ್ಟಾಚಾರದ ಅನುಸರಣೆಯಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ವಿನಿಯಮಗಳ ಮಾರ್ಗಸೂಚಿಗಳನ್ನು 21ನೇ ನವೆಂಬರ್, 2014 ರಂದು **"ಜೈವಿಕ ಸಂಪನ್ಮೂಲಗಳು ಮತ್ತು ಅವುಗಳಿಗೆ ಸಂಬಂಧಿಸಿದ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಹಾಗೂ ಲಾಭಗಳನ್ನು ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದ ವಿನಿಯಮಗಳು, 2014" ಎಂದು ಸೂಚಿಸಲಾಗಿದೆ.**

1. **ಸಂಶೋಧನೆಗಾಗಿ ಜೈವಿಕ ಸಂಪನ್ಮೂಲಗಳನ್ನು ಮತ್ತು/ಅಥವಾ ಅದಕ್ಕೆ ಸಂಬಂಧಿಸಿದ ಪಾರಂಪರಿಕ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಅಥವಾ ಸಂಶೋಧನೆಗಾಗಿ ಜೈವಿಕ–ಸಮೀಕ್ಷೆ ಮತ್ತು ಜೈವಿಕ ಉಪಯೋಗದ ಕಾರ್ಯ ವಿಧಾನ.–**

(1) ಸಂಶೋಧನೆಗಾಗಿ ಜೈವಿಕ ಸಂಪನ್ಮೂಲಗಳನ್ನು ಮತ್ತು/ಅಥವಾ ಅದಕ್ಕೆ ಸಂಬಂಧಿಸಿದ ಜ್ಞಾನವನ್ನು ಪಡೆಯುವುದಕ್ಕೆ ಅಥವಾ ಸಂಶೋಧನೆಗಾಗಿ ಜೈವಿಕ ಸಮೀಕ್ಷೆ ಮತ್ತು ಜೈವಿಕ ಉಪಯೋಗವನ್ನು ಪಡೆಯಲು ಬಯಸುವ ಈ ಅಧಿನಿಯಮದ 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು ಭಾರತದಲ್ಲಿ ದೊರೆಯುವಂತಹ ಜೈವಿಕ ಸಂಪನ್ಮೂಲಗಳನ್ನು ಮತ್ತು/ಅಥವಾ ಅದಕ್ಕೆ ಸಂಬಂಧಿಸಿದ ಪಾರಂಪರಿಕ ಜ್ಞಾನವನ್ನು ಪಡೆಯುವುದಕ್ಕಾಗಿ, ಜೈವಿಕ ವೈವಿಧ್ಯ ನಿಯಮಗಳು, 2004ರ ನಮೂನೆ–I ರಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ (ಎನ್‌ಬಿಎ) ಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು, (1)ನೇ ಉಪ ವಿನಿಯಮದ ಮೇರೆಗೆ ಸಲ್ಲಿಸಿದ ಅರ್ಜಿಯು ತೃಪ್ತಿಕರವಾಗಿದೆ ಎಂದು ಮನವರಿಕೆಯಾದ ಮೇಲೆ, ಅರ್ಜಿದಾರನೊಂದಿಗೆ ಲಾಭ ಹಂಚಿಕೆ ಒಪ್ಪಂದವನ್ನು ಮಾಡಿಕೊಳ್ಳಬೇಕು. ಅದನ್ನು ಈ ಉಪವಿನಿಯಮದಲ್ಲಿ ಉಲ್ಲೇಖಿಸಲಾದ ಸಂಶೋಧನೆಗಾಗಿ ಜೈವಿಕ ಸಂಪನ್ಮೂಲಗಳನ್ನು ಪಡೆಯುವುದಕ್ಕೆ ಅನುಮೋದಿಸಲಾದುದು ಎಂದು ಭಾವಿಸತಕ್ಕದ್ದು.



ಪರಂತು, ಜೈವಿಕ ಸಂಪನ್ಮೂಲಗಳು ಹೆಚ್ಚಿನ ಆರ್ಥಿಕ ಮೌಲ್ಯವನ್ನು ಹೊಂದಿರುವ ಸಂದರ್ಭದಲ್ಲಿ, ಒಪ್ಪಂದವು ಈ ಲಾಭದ ಹಂಚಿಕೆಯು ಅರ್ಜಿದಾರನಿಂದ ಮುಂಗಡ ಸಂದಾಯ ಮಾಡುವುದನ್ನು ಸೇರಿಸತಕ್ಕದ್ದು ಎಂಬ ಖಂಡವನ್ನು ಒಳಗೊಂಡಿರಬಹುದು. ಅಂತಹ ಮೊತ್ತಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಮತ್ತು ಅರ್ಜಿದಾರನ ನಡುವೆ ಪರಸ್ಪರ ಒಪ್ಪಂದವಾಗಿರಬೇಕು.

**2. ವಾಣಿಜ್ಯ ಬಳಕೆಗಾಗಿ ಅಥವಾ ಜೈವಿಕ ಸಮೀಕ್ಷೆಗಾಗಿ ಮತ್ತು ವಾಣಿಜ್ಯ ಬಳಕೆಯ ಜೈವಿಕ ಉಪಯೋಗಕ್ಕೆ ಜೈವಿಕ ಸಂಪನ್ಮೂಲಗಳನ್ನು ಪಡೆಯುವುದಕ್ಕೆ ಇರುವ ಕಾರ್ಯವಿಧಾನ.–**

(1) ಜಂಟಿ ಅರಣ್ಯ ವ್ಯವಸ್ಥಾಪನಾ ಸಮಿತಿ (ಜೆಎಫ್‌ಎಂಸಿ)/ಅರಣ್ಯ ನಿವಾಸಿ/ಬುಡಕಟ್ಟು ಸಾಗುವಳಿದಾರ/ಗ್ರಾಮ ಸಭೆಯ ಮೂಲಕ ರಕ್ಷಿಸಲ್ಪಟ್ಟ ಜೈವಿಕ ಸಂಪನ್ಮೂಲಗಳನ್ನು ಪಡೆಯುವುದೂ ಸೇರಿದಂತೆ, ಜೈವಿಕ ಸಂಪನ್ಮೂಲಗಳನ್ನು ಹೊಂದಲು ಇಚ್ಛೆಯುಳ್ಳ ಯಾರೇ ವ್ಯಕ್ತಿಯು ಭಾರತದಲ್ಲಿ ದೊರೆಯುವಂತಹ ಜೈವಿಕ ಸಂಪನ್ಮೂಲಗಳನ್ನು ಮತ್ತು/ಅಥವಾ ಅದಕ್ಕೆ ಸಂಬಂಧಿಸಿದ ಪಾರಂಪರಿಕ ಜ್ಞಾನವನ್ನು ಪಡೆಯುವುದಕ್ಕಾಗಿ, ಜೈವಿಕ ವೈವಿಧ್ಯ ನಿಯಮಗಳು, 2004ರ ನಮೂನೆ–I ರಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ (ಎನ್‌ಬಿಎ)ಕ್ಕೆ ಅಥವಾ ಸಂದರ್ಭಾನುಸಾರ ರಾಜ್ಯ ಜೀವವೈವಿಧ್ಯ ಮಂಡಳಿ (ಎಸ್‌ಬಿಬಿ)ಯು ನಿಯಮಿಸಬಹುದಾದಂತಹ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಅಥವಾ ಸಂದರ್ಭಾನುಸಾರ, ರಾಜ್ಯ ಜೀವವೈವಿಧ್ಯ ಮಂಡಳಿಯು (1)ನೇ ಉಪ–ನಿಯಮದ ಮೇರೆಗೆ ಸಲ್ಲಿಸಿದ ಅರ್ಜಿಯು ತೃಪ್ತಿಕರವಾಗಿದೆ ಎಂದು ಮನವರಿಕೆಯಾದ ಮೇಲೆ ಅರ್ಜಿದಾರನೊಂದಿಗೆ ಲಾಭ ಹಂಚಿಕೆ ಒಪ್ಪಂದವನ್ನು ಮಾಡಿಕೊಳ್ಳಬೇಕು. ಅದನ್ನು ಆ ಉಪನಿಯಮದಲ್ಲಿ ಉಲ್ಲೇಖಿಸಿದ ವಾಣಿಜ್ಯ ಉಪಯೋಗಕ್ಕೆ ಅಥವಾ ಜೈವಿಕ ಸಮೀಕ್ಷೆಗಾಗಿ ಮತ್ತು ವಾಣಿಜ್ಯ ಬಳಕೆಯ ಜೈವಿಕ ಉಪಯೋಗಕ್ಕೆ ಜೈವಿಕ ಸಂಪನ್ಮೂಲಗಳನ್ನು ಪಡೆಯುವುದಕ್ಕಾಗಿ ಅನುಮೋದಿಸಲಾದುದು ಎಂದು ಭಾವಿಸತಕ್ಕದ್ದು.

**3. ವಾಣಿಜ್ಯ ಬಳಕೆಗಾಗಿ ಅಥವಾ ಜೈವಿಕ–ಸಮೀಕ್ಷೆಗಾಗಿ ಮತ್ತು ಜೈವಿಕ ಬಳಕೆಗಾಗಿ ಜೈವಿಕ ಸಂಪನ್ಮೂಲಗಳನ್ನು ಪಡೆಯುವುದಕ್ಕೆ ಲಾಭದ ಹಂಚಿಕೆ ವಿಧಾನ.–**

(1) ಅರ್ಜಿದಾರ/ವ್ಯಾಪಾರಿ/ತಯಾರಕರು ಜಂಟಿ ಅರಣ್ಯ ವ್ಯವಸ್ಥಾಪನಾ ಸಮಿತಿ (ಜೆಎಫ್‌ಎಂಸಿ)/ಅರಣ್ಯ ನಿವಾಸಿ/ಆದಿವಾಸಿ ಸಾಗುವಳಿದಾರ/ಗ್ರಾಮಸಭೆಯ ಅಂತಹ ವ್ಯಕ್ತಿಗಳೊಂದಿಗೆ ಯಾವುದೇ ಪೂರ್ವ ಲಾಭ ಹಂಚಿಕೆಯ ಕರಾರನ್ನು ಮಾಡಿಕೊಂಡಿಲ್ಲದಿದ್ದರೆ ಮತ್ತು ಈ ವ್ಯಕ್ತಿಗಳಿಂದ ನೇರವಾಗಿ ಯಾವುದೇ ಜೈವಿಕ ಸಂಪನ್ಮೂಲಗಳನ್ನು ಖರೀದಿಸಿದ್ದರೆ ವ್ಯಾಪಾರಿಗೆ ಸಂಬಂಧಿಸಿದ ಲಾಭ ಹಂಚಿಕೆಯ ಹೊಣೆಗಾರಿಕೆಗಳು ಜೈವಿಕ ಸಂಪನ್ಮೂಲಗಳ ಖರೀದಿ ಬೆಲೆಯ ಶೇ. 1.0 ರಿಂದ 3.0 ರ ಪರಿಮಿತಿಯಲ್ಲಿ ಇರತಕ್ಕದ್ದು ಮತ್ತು ತಯಾರಿಕನಿಗೆ ಸಂಬಂಧಿಸಿದ ಲಾಭ ಹಂಚಿಕೆಯ ಹೊಣೆಗಾರಿಕೆಗಳು ಜೈವಿಕ ಸಂಪನ್ಮೂಲಗಳ ಖರೀದಿ ಬೆಲೆಯ ಶೇ. 3.0 ರಿಂದ 5.0 ರ ಪರಿಮಿತಿಯಲ್ಲಿ ಇರತಕ್ಕದ್ದು.

ಪರಂತು, ವ್ಯಾಪಾರಿಯು ತನ್ನಿಂದ ಖರೀದಿಸಿದ ಜೈವಿಕ ಸಂಪನ್ಮೂಲಗಳನ್ನು ಮತ್ತೊಬ್ಬ ವ್ಯಾಪಾರಿ ಅಥವಾ ತಯಾರಕನಿಗೆ ಮಾರಾಟ ಮಾಡಿದ್ದಲ್ಲಿ, ಖರೀದಿಸಿದವನಿಗೆ ಸಂಬಂಧಿಸಿದಂತೆ ಲಾಭ ಹಂಚಿಕೆಯ ಹೊಣೆಗಾರಿಕೆಯು ಅವನು ಒಬ್ಬ ವ್ಯಾಪಾರಿಯಾಗಿದ್ದರೆ, ಖರೀದಿ ಬೆಲೆಯ ಶೇ. 1.0 ರಿಂದ 3.0 ನಡುವಿನ ಪರಿಮಿತಿಯಲ್ಲಿ ಮತ್ತು ಅವನು ಒಬ್ಬ ತಯಾರಕನಾಗಿದ್ದರೆ, ಖರೀದಿ ಬೆಲೆಯ ಶೇ. 3.0 ರಿಂದ 5.0 ರ ನಡುವಿನ ಪರಿಮಿತಿಯಲ್ಲಿ ಇರತಕ್ಕದ್ದು.

ಮತ್ತೂ ಪರಂತು, ಖರೀದಿದಾರನು, ಪೂರೈಕೆ ಸರಪಣಿಯಲ್ಲಿ ಅತಿ ನಿಕಟವಾದ ಮಾರಾಟಗಾರರ ಮೂಲಕ ಲಾಭದ ಹಂಚಿಕೆಯ ಆಧಾರವನ್ನು ಸಲ್ಲಿಸಿದ್ದರೆ, ಖರೀದಿದಾರನಿಗೆ ಸಂಬಂಧಿಸಿದ ಲಾಭ ಹಂಚಿಕೆಯ ಹೊಣೆಗಾರಿಕೆಯು ಖರೀದಿ ಬೆಲೆಯ ಆ ಭಾಗಕ್ಕೆ ಸಂಬಂಧಿಸಿದಂತೆ ಮಾತ್ರವೇ ಅನ್ವಯವಾಗತಕ್ಕದ್ದು, ಆ ಲಾಭವು ಪೂರೈಕೆ ಸರಪಣಿಯಲ್ಲಿ ಹಂಚಿಕೆಯಾಗಬಾರದು.




(2) ಅರ್ಜಿದಾರ/ವ್ಯಾಪಾರಿ/ತಯಾರಕನು ಜಂಟಿ ಅರಣ್ಯ ವ್ಯವಸ್ಥಾಪನಾ ಸಮಿತಿ (ಜೆಎಫ್‌ಎಂಸಿ)/ಅರಣ್ಯ ನಿವಾಸಿ/ಆದಿವಾಸಿ ಸಾಗುವಳಿದಾರ/ಗ್ರಾಮ ಸಭೆಯ ಅಂತಹ ವ್ಯಕ್ತಿಗಳೊಂದಿಗೆ ಯಾವುದೇ ಪೂರ್ವ ಲಾಭ ಹಂಚಿಕೆಯ ಕರಾರನ್ನು ಮಾಡಿಕೊಂಡಿದ್ದರೆ, ಮತ್ತು ಈ ವ್ಯಕ್ತಿಗಳಿಂದ ನೇರವಾಗಿ ಯಾವುದೇ ಜೈವಿಕ ಸಂಪನ್ಮೂಲಗಳನ್ನು ಖರೀದಿಸಿದ್ದರೆ, ಅರ್ಜಿದಾರನಿಗೆ ಸಂಬಂಧಿಸಿದ ಲಾಭ ಹಂಚಿಕೆಯ ಹೊಣೆಗಾರಿಕೆಗಳು ಜೈವಿಕ ಸಂಪನ್ಮೂಲಗಳ ಖರೀದಿ ಬೆಲೆಯ ಶೇ. 3.0 ರಷ್ಟಕ್ಕಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಖರೀದಿದಾರನು ವ್ಯಾಪಾರಿಯಾಗಿದ್ದ ಹಾಗೂ ಖರೀದಿದಾರನು ತಯಾರಕನಾಗಿದ್ದ ಸಂದರ್ಭದಲ್ಲಿ ಜೈವಿಕ ಸಂಪನ್ಮೂಲಗಳ ಖರೀದಿ ಬೆಲೆಯ ಶೇ. 5.0 ರಷ್ಟಕ್ಕಿಂತ ಕಡಿಮೆಯಾಗತಕ್ಕದ್ದಲ್ಲ.

(3) ಶ್ರೀಗಂಧದ ಮರ, ರಕ್ತ ಚಂದನ, ಇತ್ಯಾದಿ ಮತ್ತು ಅವುಗಳ ಉತ್ಪನ್ನಗಳಂಥ ಹೆಚ್ಚಿನ ಮೌಲ್ಯ ಹೊಂದಿರುವ ಜೈವಿಕ ಸಂಪನ್ಮೂಲಗಳ ಸಂದರ್ಭದಲ್ಲಿ ಲಾಭ ಹಂಚಿಕೆಯು ಎನ್‌ಬಿಎಯ ಅಥವಾ ಸಂದರ್ಭಾನುಸಾರ, ಎಸ್‌ಬಿಬಿ ಮೂಲಕ ತೀರ್ಮಾನಿಸಿದಂತೆ ಹರಾಜು ಹುಟ್ಟುವಳಿಯ ಅಥವಾ ಮಾರಾಟದಿಂದ ಬಂದ ಹಣಕ್ಕೆ ಸಂಬಂಧಿಸಿದಂತೆ ಶೇ. 5.0 ರಷ್ಟಕ್ಕಿಂತ ಕಡಿಮೆ ಇಲ್ಲದಷ್ಟು ಮುಂಗಡ ಸಂದಾಯ ಮಾಡುವುದನ್ನು ಒಳಗೊಳ್ಳಬಹುದು ಮತ್ತು ಯಶಸ್ವೀ ಬಿಡ್‌ದಾರ ಅಥವಾ ಖರೀದಿದಾರನು ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಮುಂಚೆ ಗೊತ್ತುಪಡಿಸಿದ ನಿಧಿಗೆ ಹಣವನ್ನು ಸಂದಾಯ ಮಾಡತಕ್ಕದ್ದು.

**4. 2ನೇ ವಿನಿಯಮದ ಮೇರೆಗೆ ವಾಣಿಜ್ಯ ಬಳಕೆಗಾಗಿ ಪಡೆದುಕೊಂಡ ಜೈವಿಕ ಸಂಪನ್ಮೂಲಗಳ ಮಾರಾಟ ಬೆಲೆಗೆ ಸಂಬಂಧಿಸಿದಂತೆ ಲಾಭ ಹಂಚಿಕೆಯ ಆಯ್ಕೆ.–**

ವಾಣಿಜ್ಯ ಬಳಕೆಗಾಗಿ ಅಥವಾ ವಾಣಿಜ್ಯ ಬಳಕೆಯನ್ನು ಮುಂದುವರೆಸುವುದಕ್ಕೆ ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವಾಗ ಅರ್ಜಿದಾರನು ಕಾರ್ಖಾನೆಯ ಉತ್ಪನ್ನ ಮಾರಾಟದ ವಾರ್ಷಿಕ ಒಟ್ಟು ಈ ಕೆಳಕಂಡ ಶ್ರೇಣಿಯ ಶೇಕಡಾವಾರುಗಳಲ್ಲಿ ಶೇ. 0.1 ರಿಂದ 0.5 ರಷ್ಟರ ಪರಿಮಿತಿಯ ಲಾಭ ಹಂಚಿಕೆಯನ್ನು ಸಂದಾಯ ಮಾಡುವುದನ್ನು ಆಯ್ಕೆ ಮಾಡಿಕೊಳ್ಳಬೇಕು. ಇದನ್ನು ಈ ಕೆಳಗೆ ನೀಡಲಾದಂತೆ ಸರ್ಕಾರದ ತೆರಿಗೆಯನ್ನು ಕಳೆದು ಕಾರ್ಖಾನೆಯ ಉತ್ಪನ್ನ ಮಾರಾಟದ ವಾರ್ಷಿಕ ಒಟ್ಟು ಹಣದ ಆಧಾರದಲ್ಲಿ ಲೆಕ್ಕ ಹಾಕತಕ್ಕದ್ದು:–

| ಉತ್ಪನ್ನದ ವಾರ್ಷಿಕ ಒಟ್ಟು ಕಾರ್ಖಾನೆಯ ಉತ್ಪನ್ನದ ಮಾರಾಟ (ex-factory) | ಲಾಭ ಹಂಚಿಕೆಯ ಪಾಲು |
|---|---|
| 1,00,00,000 ರೂಪಾಯಿಗಳವರೆಗೆ | ಶೇ. 0.1 |
| 1,00,00,001 ರೂಪಾಯಿಗಳಿಂದ 3,00,00,000 ರೂಪಾಯಿಗಳವರೆಗೆ | ಶೇ. 0.2 |
| 3,00,00,000 ರೂಪಾಯಿಗಳಿಗೂ ಮೇಲ್ಪಟ್ಟು | ಶೇ. 0.5 |

ಎಬಿಎಸ್ ವಿನಿಯಮನಗಳು, 2014ನ್ನು ಇಲ್ಲಿಂದ ಪಡೆದುಕೊಳ್ಳಬಹುದು (ಡೌನ್‌ಲೋಡ್ ಮಾಡಿಕೊಳ್ಳಬಹುದು):

http://nbaindia.org/uploaded/pdf/Gazette_Notification_of_ABS_Guidlines.pdf



**ಎಬಿಎಸ್ ಲೆಕ್ಕಾಚಾರ:**

ವಿನಿಯಮನ 3ರ ಪ್ರಕಾರ, ಕರ್ನಾಟಕ ಜೀವವೈವಿಧ್ಯ ಮಂಡಳಿಯು ಎಬಿಎಸ್ ಘಟಕದ ಲೆಕ್ಕಾಚಾರಕ್ಕಾಗಿ ನಿರ್ದಿಷ್ಟ ಮಾರ್ಗದರ್ಶಿ ಸೂತ್ರಗಳನ್ನು ಜಾರಿಗೊಳಿಸಿದೆ. ಇದು ವಿವಿಧ ಅಪಾಯ/ಬೆದರಿಕೆ ವರ್ಗಗಳಡಿಯಲ್ಲಿರುವ ಸಸ್ಯ ಪ್ರಭೇದಗಳ ಆಧಾರದ ಮೇಲೆ ವ್ಯಾಪಾರಿಗಳಿಗೆ 1–3% ಮತ್ತು ತಯಾರಕರಿಗೆ 3–5% ದ ಪರಿಮಿತಿಯಲ್ಲಿ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ಮಂಡಳಿಯನ್ನು ಸಂಪರ್ಕಿಸಿ.

ಮಂಡಳಿಯ 30ನೇ ಸಭೆಯ ನಂತರ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಉತ್ಪನ್ನದ (ವಿನಿಯಮನ4) ವಾರ್ಷಿಕ ಒಟ್ಟು ಕಾರ್ಖಾನೆಯ ಉತ್ಪನ್ನದ (ex-factory) ಮಾರಾಟದ ಆಧಾರದ ಮೇಲೆ ಎಬಿಎಸ್ ಅನ್ನು ಪಾವತಿಸಲು ಆಯ್ಕೆ ಮಾಡುವ ತಯಾರಕರಿಗಾಗಿ ಒಂದು ಪ್ರೊ–ಫಾರ್ಮಾವನ್ನು (ಎಬಿಎಸ್ ಲೆಕ್ಕಾಚಾರದ ಫಾರ್ಮ್) ಕೂಡಾ ಸೂಚಿಸಿದೆ.

**ಸಾಮಾನ್ಯವಾಗಿ ವ್ಯಾಪಾರ ಮಾಡಬಹುದಾದ ಪದಾರ್ಥಗಳು (NTAC):**

ಪ್ರಕರಣ 40ರ ಮೇರೆಗೆ ಕೇಂದ್ರ ಸರ್ಕಾರವು, 385 ಜೈವಿಕ ಸಂಪನ್ಮೂಲಗಳನ್ನು ಸಾಮಾನ್ಯವಾಗಿ ವ್ಯಾಪಾರವಾಗುವ ಸರಕುಗಳೆಂದು ಸೂಚಿಸಿದೆ. ಈ ಜೈವಿಕ ಸಂಪನ್ಮೂಲಗಳು ಅಧಿನಿಯಮದ ವ್ಯಾಪ್ತಿಯಿಂದ ವಿನಾಯಿತಿಯನ್ನು ಪಡೆದಿವೆ.

1. ಆದಾಗ್ಯೂ, ಈ ಯಾವುದೇ ವಸ್ತುಗಳನ್ನು ಬೇರೆ ಯಾವುದಾದರೂ ಉದ್ದೇಶಕ್ಕಾಗಿ ಉಪಯೋಗಿಸಬೇಕಾದರೆ, ಅಧಿನಿಯಮದ ಸಂಬಂಧಿತ ಉಪಬಂಧಗಳು ಅನ್ವಯವಾಗುತ್ತವೆ.
2. ಅಧಿಸೂಚನೆಯಲ್ಲಿ ಪಟ್ಟಿ ಮಾಡಲ್ಪಟ್ಟ ವಸ್ತುಗಳಿಂದ ಪಡೆಯಲಾದ ಮತ್ತು ಸಾಮಾನ್ಯ ಆಚರಣೆಯಂತೆ ಮಾರಾಟವಾದ ಉತ್ಪನ್ನಗಳನ್ನು ಕೂಡಾ ಸಾಮಾನ್ಯವಾಗಿ ವ್ಯಾಪಾರವಾಗುವ ಸರಕುಗಳಂತೆ ಪರಿಗಣಿಸಬೇಕು ಮತ್ತು ಅಂತಹ ಸಂದರ್ಭಗಳಲ್ಲಿ, ಹೇಳಲ್ಪಟ್ಟ ಉತ್ಪನ್ನವು ಸಾಮಾನ್ಯ ಆಚರಣೆಯ ಮಿತಿಯೊಳಗೆ ಬರುತ್ತದೆ ಎನ್ನುವುದನ್ನು ರುಜುವಾತು ಮಾಡುವ ಹೊಣೆ ಹಕ್ಕುದಾರನದ್ದಾಗಿರಬೇಕು.
3. ಸಾಗುವಳಿ ಅಥವಾ ಪೋಷಿಸಿದ ಪ್ರಭೇದಗಳ ವನ್ಯಜಾತಿಗಳಿಗೆ ಅಧಿಸೂಚನೆಯು ಅನ್ವಯವಾಗುವುದಿಲ್ಲ (ಜೈವಿಕ ಸಂಪನ್ಮೂಲಗಳು).

ಸಾಮಾನ್ಯವಾಗಿ ವ್ಯಾಪಾರ ಮಾಡಬಹುದಾದ ಸರಕು ಪದಾರ್ಥಗಳು, 2015ರ ಕುರಿತ ರಾಜ್ಯಪತ್ರ (ಗೆಜೆಟ್) ಅಧಿಸೂಚನೆಯನ್ನು ಇಲ್ಲಿಂದ ಪಡೆದು ಕೊಳ್ಳಬಹುದು (ಡೌನ್‌ಲೋಡ್ ಮಾಡಿಕೊಳ್ಳಬಹುದು):

http://nbaindia.org/uploaded/pdf/Notification_of_Normally_Traded_Commidities_dt_7_April_2016.pdf

**ಕೆಲವು ಚಟುವಟಿಕೆಗಳು ಅಥವಾ ವ್ಯಕ್ತಿಗಳನ್ನು ಎನ್‌ಬಿಎ ಅಥವಾ ಎಸ್‌ಬಿಬಿಯ ಅನುಮೋದನೆಯಿಂದ ವಿನಾಯಿತಿಸುವುದು–**

ಈ ಕೆಳಕಂಡ ಚಟುವಟಿಕೆಗಳು ಅಥವಾ ವ್ಯಕ್ತಿಗಳಿಗೆ ಅಂದರೆ,–

(ಎ) ಭಾರತದ ನಾಗರಿಕರು ಅಥವಾ ಭಾರತದಲ್ಲಿ ಸಂಶೋಧನೆಯ ಅಥವಾ ಜೈವಿಕ ಸರ್ವೆಯ ಮತ್ತು ಜೈವಿಕ ಬಳಕೆಯ ಉದ್ದೇಶಗಳಿಗಾಗಿ ಭಾರತದಲ್ಲಿ ದೊರೆಯುವ ಅಥವಾ ಭಾರತದಿಂದ ಪಡೆದ ಜೈವಿಕ ಸಂಪನ್ಮೂಲಗಳನ್ನು ಮತ್ತು/ಅಥವಾ ಅದಕ್ಕೆ ಸಂಬಂಧಿಸಿದ ಜ್ಞಾನವನ್ನು ಪಡೆದುಕೊಳ್ಳುತ್ತಿರುವ ಘಟಕಗಳಿಗೆ(entities);

(ಬಿ) ಸಹಭಾಗಿತ್ವ ಸಂಶೋಧನೆ ಯೋಜನೆಗಳನ್ನು ಸಂಬಂಧಪಟ್ಟ ಮಂತ್ರಾಲಯದ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಇಲಾಖೆಯ ಮೂಲಕ ಅನುಮೋದಿಸಲಾಗಿದ್ದರೆ ಮತ್ತು ಅಂತಹ ಸಹಭಾಗಿತ್ವದ ಸಂಶೋಧನೆಯ ಯೋಜನೆಗಳು ಕೇಂದ್ರ ಸರ್ಕಾರದಿಂದ ನೀಡಿದ ನೀತಿ ಮಾರ್ಗದರ್ಶನಗಳಿಗೆ ಅನುರೂಪವಾಗಿದ್ದು, ಅವು ಜೈವಿಕ ಸಂಪನ್ಮೂಲಗಳ ಅಥವಾ ಅದಕ್ಕೆ ಸಂಬಂಧಿಸಿದ ಮಾಹಿತಿಯ ವರ್ಗಾವಣೆ ಅಥವಾ ವಿನಿಮಯ ಮಾಡಿಕೊಳ್ಳುವುದನ್ನು ಒಳಗೊಳ್ಳುವಂತಹ ಯೋಜನೆಗಳಾಗಿದ್ದರೆ ಅಂತಹ ಸಹಭಾಗಿತ್ವ ಸಂಶೋಧನೆ ಯೋಜನೆಗಳು;



(ಸಿ) ಜೈವಿಕ ಸಂಪನ್ಮೂಲಗಳ ಬೆಳೆಗಾರರು ಮತ್ತು ಸಾಗುವಳಿದಾರರನ್ನು ಒಳಗೊಂಡಂತೆ ಆ ಪ್ರದೇಶದ ಸ್ಥಳೀಯ ಜನರನ್ನು ಮತ್ತು ಸಮುದಾಯಗಳನ್ನು ಮತ್ತು ಬೌದ್ಧಿಕ ಆಸ್ತಿ ಹಕ್ಕನ್ನು ಪಡೆದವರನ್ನು ಹೊರತುಪಡಿಸಿ ಸ್ಥಳೀಯ ವೈದ್ಯ ವೃತ್ತಿಯನ್ನು ನಡೆಸುತ್ತಿರುವ ವೈದ್ಯರು ಮತ್ತು ಹಕೀಮರುಗಳಿಗೆ;

(ಡಿ) ಭಾರತದಲ್ಲಿ ಯಾವುದೇ ಕೃಷಿ, ತೋಟಗಾರಿಕೆ, ಕೋಳಿ ಸಾಕಣೆ, ಹೈನುಗಾರಿಕೆ, ಪಶು ಸಂಗೋಪನೆ ಅಥವಾ ಜೇನು ಸಾಕಣೆ ಬಳಕೆಯಲ್ಲಿ ಪಾರಂಪರಿಕ ತಳಿವರ್ಧನೆ ಅಥವಾ ಪರಂಪರಾಗತವಾಗಿ ಬಂದ ಪದ್ಧತಿಗಳಿಗಾಗಿ ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವುದಕ್ಕೆ;

(ಇ) ಯಾವುದೇ ವಿಚಾರ ಸಂಕೀರಣ ಅಥವಾ ಕಾರ್ಯಗಾರದಲ್ಲಿ ಮಂಡಿಸಲಾದ ಸಂಶೋಧನಾ ಲೇಖನಗಳು ಅಥವಾ ಜ್ಞಾನದ ಪ್ರಸಾರವನ್ನು ಪ್ರಕಟಿಸುವಂಥ ಪ್ರಕಟಣೆಗೆ, ಅಂಥ ಪ್ರಕಟಣೆಯು ಕೇಂದ್ರ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳ ಅನುಸಾರವಾಗಿ ಪ್ರಕಟವಾಗುತ್ತಿದ್ದರೆ ಅದಕ್ಕೆ;

(ಎಫ್) ಮಾನ್ಯತೆ ಪಡೆಯದ ಅಥವಾ ವಾಸ್ತವಿಕವಾಗಿ ಬೇರ್ಪಡಿಸಲಾಗದ ರೂಪದಲ್ಲಿನ ಸಸ್ಯಗಳ ಮತ್ತು ಪ್ರಾಣಿಗಳ ಭಾಗಗಳನ್ನು ಅಥವಾ ಅವುಗಳ ಸತ್ವಯುತ ಭಾಗವನ್ನು ಒಳಗೊಂಡ ಉತ್ಪನ್ನಗಳಾಗಿರುವ ಮೌಲ್ಯವರ್ಧಿತ ಉತ್ಪನ್ನಗಳನ್ನು ಪಡೆದುಕೊಳ್ಳುವುದಕ್ಕೆ; ಮತ್ತು

(ಜಿ) ಈ ಅಧಿನಿಯಮದ 40ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಅಧಿಸೂಚಿಸಿದ ಸರಕುಗಳಾದಂತಹ ಸಾಮಾನ್ಯವಾಗಿ ವ್ಯಾಪಾರ ಮಾಡುವ ಜೈವಿಕ ಸಂಪನ್ಮೂಲಗಳಿಗೆ

– ಎನ್‌ಬಿಎ ಅಥವಾ ಎಸ್‌ಬಿಬಿಯ ಅನುಮೋದನೆಯು ಅಗತ್ಯವಾಗಿರತಕ್ಕದ್ದಲ್ಲ.

## ಇತರ ಪ್ರಮುಖ ಲಕ್ಷಣಗಳು


### 1. ಎನ್‌ಬಿಎ, ಎಸ್‌ಬಿಬಿ ಮತ್ತು ಜೀವವೈವಿಧ್ಯ ನಿರ್ವಹಣಾ ಸಮಿತಿ (ಬಿಎಂಸಿ)ಯ ಸಂಯೋಜನೆ

(ಎ). ಎನ್‌ಬಿಎಯು, ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ (ಜೈವಿಕ ವೈವಿಧ್ಯ ಅಧಿನಿಯಮ, 2002 ರ ಪ್ರಕರಣ 8ನ್ನು ಉಲ್ಲೇಖಿಸಿ) ಉಪಯೋಗದಿಂದ ಉಂಟಾಗುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಹಂಚಿಕೆಯ ಸಮಸ್ಯೆಗಳ ಕುರಿತು ಭಾರತ ಸರ್ಕಾರಕ್ಕೆ ನಿಯಂತ್ರಕ ಮತ್ತು ಸಲಹಾ ಕಾರ್ಯವನ್ನು ನಿರ್ವಹಿಸಲು 2003ರಲ್ಲಿ ಸ್ಥಾಪಿತವಾದ, ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಅಧೀನದಲ್ಲಿರುವ ಒಂದು ಶಾಸನ ಬದ್ಧ, ಸ್ವಾಯತ್ತ ಅಂಗವಾಗಿದೆ. ತಮಿಳುನಾಡಿನ ಚೆನ್ನೈನಲ್ಲಿ ತನ್ನ ಪ್ರಧಾನ ಕಚೇರಿಯನ್ನು ಹೊಂದಿರುವ ಎನ್‌ಬಿಎಯು, ಪ್ರಾಧಿಕಾರ, ಸಚಿವಾಲಯ, ಎಸ್‌ಬಿಬಿಗಳು, ಬಿಎಂಸಿಗಳು ಮತ್ತು ತಜ್ಞ ಸಮಿತಿಗಳನ್ನು ಒಳಗೊಂಡ ಸಂರಚನೆಯ ಮೂಲಕ ತನ್ನ ಆದೇಶವನ್ನು ಹೊರಡಿಸುತ್ತದೆ.

(ಬಿ). ಎಸ್‌ಬಿಬಿಗಳು ರಾಜ್ಯ ಸರ್ಕಾರದಿಂದ ಸ್ಥಾಪಿತವಾಗಿವೆ. ಇವುಗಳು ಈ ಕಾಯ್ದೆಯ ಉಪಬಂಧಗಳನ್ನು ಕೈಗೊಳ್ಳಲು ಜೀವ ವೈವಿಧ್ಯದ ಸಂರಕ್ಷಣೆಗೆ ಸಂಬಂಧಿಸಿದ ವಿಚಾರಗಳಲ್ಲಿ, ವಾಣಿಜ್ಯ ಬಳಕೆ ಅಥವಾ ಜೈವಿಕ–ಸಮೀಕ್ಷೆ ಮತ್ತು ಭಾರತೀಯರಿಂದ ಯಾವುದೇ ಜೈವಿಕ ಸಂಪನ್ಮೂಲಗಳ ಜೈವಿಕ–ಉಪಯೋಗಕ್ಕಾಗಿ ಅನುಮೋದನೆಗಳ ಅಥವಾ ಕೋರಿಕೆಗಳ ಅನುಮತಿಯನ್ನು ನಿಯಂತ್ರಿಸುವಲ್ಲಿ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವ ಮೂಲಕ ಕಾರ್ಯ ನಿರ್ವಹಿಸುತ್ತವೆ ಮತ್ತು ಅಗತ್ಯವಿದ್ದಾಗಲೆಲ್ಲ ರಾಜ್ಯ ಸರ್ಕಾರದಿಂದ ಸೂಚಿತವಾಗಬಹುದಾದ ಇತರ ಪ್ರಕಾರ್ಯಗಳನ್ನು ನಿರ್ವಹಿಸುತ್ತವೆ.



(ಸಿ). ಬಿಎಂಸಿ: ಅಧಿನಿಯಮದ ಪ್ರಕರಣ 41ರಡಿಯಲ್ಲಿ ಪ್ರತಿಯೊಂದು ಸ್ಥಳೀಯ ಸಂಸ್ಥೆಯೂ, ಆವಾಸಗಳ, ಕೃಷಿ ಪ್ರಭೇದಗಳ, ನಾಟಿ ಪ್ರಭೇದಗಳ ಮತ್ತು ತಳಿಗಳ ಸಂರಕ್ಷಣೆ, ಸಾಕುಪ್ರಾಣಿಗಳು ಮತ್ತು ಪ್ರಾಣಿಗಳ ತಳಿಗಳು ಹಾಗೂ ಸೂಕ್ಷ್ಮಜೀವಿಗಳು ಮತ್ತು ಜೈವಿಕ ವೈವಿಧ್ಯತೆಗೆ ಸಂಬಂಧಿಸಿದ ಜ್ಞಾನದ ಇತಿಹಾಸವನ್ನು ಒಳಗೊಂಡು, ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ದಾಖಲಾತಿಯನ್ನು ಉತ್ತೇಜಿಸುವ ಉದ್ದೇಶಕ್ಕಾಗಿ ತನ್ನ ಪ್ರದೇಶದೊಳಗೆ ಒಂದು ಜೀವ ವೈವಿಧ್ಯ ನಿರ್ವಹಣಾ ಸಮಿತಿಯನ್ನು ರೂಪಿಸತಕ್ಕದ್ದು.



**ಬಿಎಂಸಿಯಿಂದ ಶುಲ್ಕದ ಸಂಗ್ರಹ**

ಸ್ಥಳೀಯ ಅಂಗಸಂಸ್ಥೆಗಳಿಂದ ರಚಿತವಾದ ಬಿಎಂಸಿಗಳು ಜೈವಿಕ ವೈವಿಧ್ಯತೆಯ ಸಂರಕ್ಷಣೆ; ಸುಸ್ಥಿರ ಬಳಕೆ ಮತ್ತು ದಾಖಲಾತಿಯನ್ನು ಉತ್ತೇಜಿಸುವ ಉದ್ದೇಶಕ್ಕಾಗಿ ತನ್ನ ಕ್ಷೇತ್ರ ವ್ಯಾಪ್ತಿಯೊಳಗಿನ ಪ್ರದೇಶಗಳಿಂದ ಜೈವಿಕ ಸಂಪನ್ಮೂಲಗಳ ಲಭ್ಯತೆಗಾಗಿ ಶುಲ್ಕ ಸಂಗ್ರಹದ ರೂಪದಲ್ಲಿ ವೆಚ್ಚವನ್ನು ವಿಧಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

## 2. ಜೀವ ವೈವಿಧ್ಯತೆಯ ಪಾರಂಪರಿಕ ತಾಣಗಳು (ಬಿಎಚ್‌ಎಸ್)

ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಬಾಧಕವಾಗದಂತೆ ರಾಜ್ಯ ಸರ್ಕಾರವು, ಕಾಲಕಾಲಕ್ಕೆ ಸ್ಥಳೀಯ ಸಂಸ್ಥೆಗಳೊಂದಿಗೆ ಸಮಾಲೋಚಿಸಿ, ಈ ಅಧಿನಿಯಮದ ಮೇರೆಗೆ ಜೈವಿಕ ವೈವಿಧ್ಯತೆಯ ಪ್ರಾಮುಖ್ಯತೆ ಹೊಂದಿರುವ ಪ್ರದೇಶಗಳನ್ನು ಅಧಿನಿಯಮದ ಪ್ರಕರಣ 37ರಡಿಯಲ್ಲಿ ಜೈವಿಕ ವೈವಿಧ್ಯತೆ ಪಾರಂಪರಿಕ ತಾಣಗಳೆಂದು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸಬಹುದು.

ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ, ಎಲ್ಲಾ ಪಾರಂಪರಿಕ ಸ್ಥಳಗಳ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ನಿಯಮಗಳನ್ನು ರಚಿಸಬಹುದು ಹಾಗೂ ಅಂತಹಾ ಅಧಿಸೂಚನೆಯಿಂದ ಆರ್ಥಿಕವಾಗಿ ಬಾಧಿತನಾದ ಯಾವುದೇ ವ್ಯಕ್ತಿಗೆ ಅಥವಾ ಸಮುದಾಯಗಳಿಗೆ ಪರಿಹಾರ ನೀಡುವ ಅಥವಾ ಪುನರ್ವಸತಿ ಕಲ್ಪಿಸುವ ಯೋಜನೆಗಳನ್ನು ರೂಪಿಸಬಹುದು.

## 3. ರಾಜ್ಯ ಜೀವವೈವಿಧ್ಯ ಮತ್ತು ಸ್ಥಳೀಯ ಜೀವವೈವಿಧ್ಯ ನಿಧಿ

(ಎ) ರಾಜ್ಯ ಜೀವವೈವಿಧ್ಯ ನಿಧಿ (ಎಸ್‌ಬಿಎಫ್): ರಾಜ್ಯ ಸರ್ಕಾರ, ಎನ್‌ಬಿಎ ಅಥವಾ ಇತರ ಮೂಲಗಳಿಂದ ಪಾರಂಪರಿಕ ತಾಣಗಳ ನಿರ್ವಹಣೆಗೆ ಮತ್ತು ಸಂರಕ್ಷಣೆಗೆ, ಯಾವ ಪ್ರದೇಶಗಳಿಂದ ಅಂತಹ ಜೈವಿಕ ಸಂಪನ್ಮೂಲಗಳು ಅಥವಾ ಅದಕ್ಕೆ ಸಂಬಂಧಪಟ್ಟ ಜ್ಞಾನ ಪ್ರಾಪ್ತವಾಗಿದೆಯೋ ಅಂತಹ ಪ್ರದೇಶಗಳ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಅಥವಾ ಪ್ರಕರಣ 37ರ ಉಪ–ಪ್ರಕರಣ (1) ರಡಿಯ ಅಧಿಸೂಚನೆಯಿಂದ ಆರ್ಥಿಕವಾಗಿ ತೊಂದರೆಗೊಳಗಾದ ಜನರಿಗೆ ಪರಿಹಾರ ನೀಡಲು/ಪುನರ್ವಸತಿ ಕಲ್ಪಿಸಲು ಬಳಸುವುದಕ್ಕಾಗಿ ಎಸ್‌ಬಿಬಿಗೆ ನೀಡಲಾಗುವ ಯಾವುದೇ ಅನುದಾನಗಳು ಅಥವಾ ಸಾಲಗಳನ್ನು ಸ್ವೀಕರಿಸಲು, ಅಧಿನಿಯಮದ ಪ್ರಕರಣ 32ರಡಿಯಲ್ಲಿ ರಚಿಸಬೇಕಾಗಿರುವ ನಿಧಿ.

(ಬಿ) ಸ್ಥಳೀಯ ಜೀವವೈವಿಧ್ಯ ನಿಧಿ(ಎಲ್‌ಬಿಎಫ್): 42ನೇ ಪ್ರಕರಣದ ಮೇರೆಗೆ ನೀಡಲಾಗುವ ಎನ್‌ಬಿಎ, ಎಸ್‌ಬಿಬಿ, ಪ್ರಕರಣ 41ರ ಉಪಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ಬಿಎಂಸಿಗಳಿಂದ ಸ್ವೀಕರಿಸಲಾದ ಶುಲ್ಕಗಳು ಅಥವಾ ಇತರ ಮೂಲಗಳಿಂದ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯ ಅಧಿಕಾರ ವ್ಯಾಪ್ತಿಯೊಳಗೆ ಇರುವ ಪ್ರದೇಶಗಳಲ್ಲಿ ಜೀವವೈವಿಧ್ಯ ಸಂರಕ್ಷಣೆ ಮತ್ತು ಸಂವರ್ಧನೆಗೆ ಮತ್ತು ಅಂತಹ ಬಳಕೆಯು ಜೀವವೈವಿಧ್ಯದ ಸಂರಕ್ಷಣೆಗೆ ಸುಸಂಗತವಾಗುವಷ್ಟರಮಟ್ಟಿಗೆ ಸಮುದಾಯದ ಪ್ರಯೋಜನಕ್ಕಾಗಿ ರಾಜ್ಯ ಸರ್ಕಾರದಿಂದ ಸೂಚಿಸಲಾದ ರೀತಿಯಲ್ಲಿ ಯಾವುದೇ ಅನುದಾನಗಳನ್ನು ಮತ್ತು ಸಾಲಗಳನ್ನು ಸ್ವೀಕರಿಸಲು, ಅಧಿನಿಯಮದ ಪ್ರಕರಣ 43ರಡಿ ಯಲ್ಲಿ ರಚಿಸಬೇಕಾಗಿರುವ ನಿಧಿ.

## 4. ಜನತಾ ಜೀವವೈವಿಧ್ಯ ದಾಖಲಾತಿ (ಪಿಬಿಆರ್)

ಜೈವಿಕ ವೈವಿಧ್ಯ ಅಧಿನಿಯಮ 2002ರ ಪ್ರಕರಣ 41(1)ರ ಮತ್ತು ಜೈವಿಕ ವೈವಿಧ್ಯ ನಿಯಮಗಳು 2004ರ ಮೇರೆಗೆ, ಸ್ಥಳೀಯ ಜನರೊಂದಿಗೆ ಸಮಾಲೋಚಿಸಿ ತಯಾರಿಸುವ ದಸ್ತಾವೇಜಾದ, ಜನತಾ ಜೀವವೈವಿಧ್ಯ ದಾಖಲಾತಿಗಳನ್ನು (ಪಿಬಿಆರ್) ತಯಾರಿಸುವುದು ಬಿಎಂಸಿಯ ಪ್ರಮುಖ ಕಾರ್ಯವಾಗಿದೆ. ಒಂದು ಪ್ರತ್ಯೇಕ ಪ್ರದೇಶ ಅಥವಾ ಗ್ರಾಮದ ಭೂದೃಶ್ಯ ಮತ್ತು ಜನಸಂಖ್ಯೆ, ವಿಧಿಸಲಾದ






ಎನ್‌ಬಿಎಯು, ಒಬ್ಬ ಅಧ್ಯಕ್ಷ, ಹತ್ತು ಪದನಿಮಿತ್ತ ಸದಸ್ಯರು ಮತ್ತು ಕೇಂದ್ರ ಸರ್ಕಾರದಿಂದ ನೇಮಕವಾಗುವಂತಹ ತಜ್ಞರು ಮತ್ತು ವಿಜ್ಞಾನಿಗಳನ್ನೊಳಗೊಂಡು ಐದು ಅಧಿಕಾರೇತರ ಸದಸ್ಯರನ್ನು ಒಳಗೊಳ್ಳುತ್ತದೆ. ಎನ್‌ಬಿಎಯ ಕರ್ತವ್ಯಗಳಲ್ಲಿ ಪ್ರಕರಣ 3, 4 ಮತ್ತು 6ರ ಚಟುವಟಿಕೆಗಳನ್ನು ನಿಯಂತ್ರಿಸುವುದು ಹಾಗೂ ಜೈವಿಕ ಸಂಪನ್ಮೂಲಗಳ ಲಭ್ಯತೆಗಾಗಿ ಹಾಗೂ ಅವುಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಗಾಗಿ ಮಾರ್ಗದರ್ಶಿ ಸೂತ್ರಗಳ ಪ್ರಕಟಣೆಯು ಒಳಗೊಳ್ಳುತ್ತದೆ.

ಸಂಗ್ರಹಣಾ ಶುಲ್ಕದ ವಿವರ, ಪಡೆಯಲಾದ ಲಾಭಗಳ ಮತ್ತು ಅವುಗಳ ಹಂಚಿಕೆಯ ವಿವರಗಳನ್ನು ಒಳಗೊಂಡಂತೆ, ಸ್ಥಳೀಯ ಜೈವಿಕ ಸಂಪನ್ಮೂಲಗಳ ಲಭ್ಯತೆ ಮತ್ತು ಜ್ಞಾನದ ಸಮಗ್ರ ಮಾಹಿತಿಯನ್ನು ನೋಂದಣಿ ಪುಸ್ತಕವು ಒಳಗೊಂಡಿರತಕ್ಕದ್ದು. ಎನ್‌ಬಿಎ ಮತ್ತು ಎಸ್‌ಬಿಬಿಗಳು ನೋಂದಣಿ ಪುಸ್ತಕಗಳನ್ನು ತಯಾರಿಸಲು ಬಿಎಂಸಿಗೆ ಮಾರ್ಗದರ್ಶನ ಮತ್ತು ತಾಂತ್ರಿಕ ಬೆಂಬಲವನ್ನು ಒದಗಿಸತಕ್ಕದ್ದು.

5. **ಕಾಯ್ದೆಯ ದಂಡನಾ ಉಪಬಂಧಗಳು**

(ಎ) 3ನೇ ಪ್ರಕರಣದ ಅಥವಾ 4ನೇ ಪ್ರಕರಣದ ಅಥವಾ 6ನೇ ಪ್ರಕರಣದ ಅಡಿಯಲ್ಲಿ ಕಾಯ್ದೆಯ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು ಐದು ವರ್ಷಗಳವರೆಗೆ ಕಾರಾಗೃಹವಾಸ ಅಥವಾ ಹತ್ತು ಲಕ್ಷರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಒಂದು ವೇಳೆ ಆಗಿರುವ ಹಾನಿಯು ಮೇಲೆ ಹೇಳಿದ ಮೊತ್ತವನ್ನು ಮೀರಿದ್ದರೆ, ಜುಲ್ಮಾನೆಯು ಹಾನಿಗೆ ತಕ್ಕಂತೆ ಇರತಕ್ಕದ್ದು.

(ಬಿ) 7ನೇ ಪ್ರಕರಣದ ಅಥವಾ 24ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಕಾಯ್ದೆಯ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು ಮೂರು ವರ್ಷಗಳವರೆಗೆ ಕಾರಾಗೃಹವಾಸ ಅಥವಾ ಐದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(ಸಿ) ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಎನ್‌ಬಿಎ ಅಥವಾ ಎಸ್‌ಬಿಬಿಯ ಆದೇಶಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯೂ ಒಂದು ಲಕ್ಷ ರೂಪಾಯಿಗಳವರೆಗೆ ಮತ್ತು ನಿರಂತರ ಅಪರಾಧಕ್ಕಾಗಿ ಎರಡು ಲಕ್ಷ ರೂಪಾಯಿಗಳವರೆಗೆ ಹಾಗೂ ಉಲ್ಲಂಘನೆಗಳು ಮುಂದುವರಿದ ಸಂದರ್ಭದಲ್ಲಿ ಅಪರಾಧ ನಡೆಯುವ ಪ್ರತೀ ದಿನವೊಂದಕ್ಕೆ ಎರಡು ಲಕ್ಷ ರೂಪಾಯಿಗಳ ಹೆಚ್ಚುವರಿ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(ಡಿ) ಅಧಿನಿಯಮದ ಮೇರೆಗೆ ಕಂಪೆನಿಯಿಂದ ಅಂದರೆ, ನಿಗಮಿತ ನಿಕಾಯ, ಸಹಯೋಗ ಅಥವಾ ಸಂಸ್ಥೆಯಿಂದ ಯಾವುದಾದರೂ ಅಪರಾಧ ಅಥವಾ ಉಲ್ಲಂಘನೆಯು ಮಾಡಲ್ಪಟ್ಟರೆ, ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು ಹಾಗೂ ಜಾಮೀನೀಯವಲ್ಲದಾಗಿರತಕ್ಕದ್ದು (ಕಾಯ್ದೆಯ ಪ್ರಕರಣ 58)





ಎಸ್‌ಬಿಬಿ ಯು ಒಬ್ಬ ಅಧ್ಯಕ್ಷ, ಸಂಖ್ಯೆ ಐದನ್ನು ಮೀರದಂತೆ ಪದ ನಿಮಿತ್ತ ಸದಸ್ಯರು ಹಾಗೂ ಐದು ಸದಸ್ಯರನ್ನು ಮೀರದಂತೆ, ರಾಜ್ಯ ಸರ್ಕಾರದಿಂದ ನೇಮಿತವಾಗುವ ತಜ್ಞರನ್ನು ಒಳಗೊಂಡಿರತಕ್ಕದ್ದು. ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ಲಾಭಗಳ ನ್ಯಾಯಸಮ್ಮತ ಹಂಚಿಕೆಯ ಕುರಿತ ವಿಚಾರಗಳಿಗೆ ಹಾಗೂ ಪ್ರಕರಣ 7ರಡಿಯಲ್ಲಿ ನಿರ್ವಹಿಸಲಾಗುವ ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರದಿಂದ ಪ್ರಕಟಿಸಲಾದ ಮಾರ್ಗದರ್ಶಿ ಸೂತ್ರಗಳಿಗೆ ಒಳಪಟ್ಟು ರಾಜ್ಯ ಸರ್ಕಾರಕ್ಕೆ ಸಲಹೆಯನ್ನು ನೀಡುವುದು ಎಸ್‌ಬಿಬಿಯ ಕರ್ತವ್ಯಗಳಾಗಿವೆ.

**ಪರಿಭಾಷೆಗಳು.–**

ಪ್ರಕರಣ2 (ಬಿ) "ಜೈವಿಕ ವೈವಿಧ್ಯತೆ" ಎಂದರೆ, ಎಲ್ಲಾ ಮೂಲಗಳಿಂದ ದೊರಕುವ ಸಜೀವಿಗಳ ನಡುವಣ ಸ್ಥಿತ್ಯಂತರ ಮತ್ತು ಅವು ಭಾಗವಾಗಿರುವ ಪರಿಸರದ ಜೀವಿ ಪರಿಸ್ಥಿತಿ ಗುಣಲಕ್ಷಣಗಳ ಸಜೀವಿಗಳೊಳಗಿನ ವೈವಿಧ್ಯತೆ ಮತ್ತು ಅದು ಪ್ರಭೇದಗಳೊಳಗಿನ ಅಥವಾ ಪ್ರಭೇದಗಳ ನಡುವಿನ ಮತ್ತು ಪರಿಸರ ವ್ಯವಸ್ಥೆಗಳಲ್ಲಿನ ವೈವಿಧ್ಯತೆಯನ್ನು ಒಳಗೊಳ್ಳುತ್ತದೆ.

ಪ್ರಕರಣ2 (ಸಿ) "ಜೈವಿಕ ಸಂಪನ್ಮೂಲಗಳು" ಎಂದರೆ ಸಸ್ಯಗಳು, ಪ್ರಾಣಿಗಳು ಮತ್ತು ಸೂಕ್ಷ್ಮಾಣು ಜೀವಿಗಳು ಅಥವಾ ಅವುಗಳ ಭಾಗಗಳು, ಅವುಗಳ ಜೀವೋತ್ಪತ್ತಿ ವಸ್ತುಗಳು ಮತ್ತು ವಾಸ್ತವವಾದ ಅಥವಾ ಸಂಭಾವ್ಯ ಉಪಯೋಗವುಳ್ಳ ಅಥವಾ ಮೌಲ್ಯವುಳ್ಳ ಉಪ ಉತ್ಪನ್ನಗಳು ಎಂದು ಅರ್ಥ (ಮೌಲ್ಯವರ್ಧಿತ ಉತ್ಪನ್ನಗಳನ್ನು ಹೊರತುಪಡಿಸಿ), ಆದರೆ ಇದು ಮಾನವ ಜೀವೋತ್ಪತ್ತಿ ವಸ್ತುಗಳನ್ನು ಒಳಗೊಳ್ಳುವುದಿಲ್ಲ.

ಪ್ರಕರಣ2 (ಎಫ್) "ವಾಣಿಜ್ಯ ಬಳಕೆ" ಎಂದರೆ, ಔಷಧಗಳು, ಕೈಗಾರಿಕಾ ಕಿಣ್ವಗಳು, ಆಹಾರ ರುಚಿ ಕಾರಕಗಳು, ಪರಿಮಳಗಳು, ಪ್ರಸಾಧನಗಳು, ಹಾಲಂಧಕಗಳು, ತೈಲರಾಳಗಳು, ಬಣ್ಣಗಳು, ಸಾರಗಳು ಮತ್ತು ತಳಿ ಸಂಕರದ ಮೂಲಕ ಬೆಳೆಗಳನ್ನು ಮತ್ತು ಜಾನುವಾರುಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಬಳಸಿದ ತಳಿಗಳಂತಹ ವಾಣಿಜ್ಯ ಬಳಕೆಗಾಗಿ ಜೈವಿಕ ಸಂಪನ್ಮೂಲಗಳ ಅಂತಿಮ ಬಳಕೆ ಎಂದು ಅರ್ಥ. ಆದರೆ ಇದು ಕೃಷಿ, ತೋಟಗಾರಿಕೆ, ಕೋಳಿ ಸಾಕಣೆ, ಹೈನುಗಾರಿಕೆ, ಪಶು ಸಂಗೋಪನೆ, ಅಥವಾ ಜೇನು ಸಾಕಣೆಯಲ್ಲಿ ಬಳಕೆಯಲ್ಲಿರುವ ಸಾಂಪ್ರದಾಯಿಕ ತಳಿ ಅಭಿವೃದ್ಧಿ ಅಥವಾ ರೂಢಿಗತ ಪದ್ಧತಿಗಳನ್ನು ಒಳಗೊಳ್ಳುವುದಿಲ್ಲ.

ಪ್ರಕರಣ2 (ಪಿ) "ಮೌಲ್ಯವರ್ಧಿತ ಉತ್ಪನ್ನಗಳು" ಎಂದರೆ ಗುರುತುಹಿಡಿಯಲಾಗದಂಥ ಮತ್ತು ವಾಸ್ತವಿಕವಾಗಿ ಬೇರ್ಪಡಿಸಲಾಗದಂಥ ರೀತಿಯಲ್ಲಿ ಸಸ್ಯಗಳು ಮತ್ತು ಪ್ರಾಣಿಗಳ ಭಾಗಗಳನ್ನು ಅಥವಾ ಸಾರವನ್ನು ಒಳಗೊಂಡಿರಬಹುದಾದಂತಹ ಉತ್ಪನ್ನಗಳು ಎಂದು ಅರ್ಥ.



## ಸಂಯುಕ್ತ ರಾಷ್ಟ್ರ ವಿಶ್ವವಿದ್ಯಾನಿಲಯ ಉನ್ನತ ಅಧ್ಯಯನ ಸಂಸ್ಥೆ ಮತ್ತು ಜಾಗತಿಕ ಪರಿಸರ ಸೌಲಭ್ಯ, ಬಳಕೆ ಮತ್ತು ಲಾಭ ಹಂಚಿಕೆ ಒಪ್ಪಂದಗಳ ಯೋಜನೆಯ ಬಗ್ಗೆ:

ಈ ಯೋಜನೆಯ ಉದ್ದೇಶವು ಸಂಸ್ಥೆಯ, ಮತ್ತು ಪಾಲುದಾರರ ಸಾಮರ್ಥ್ಯವನ್ನು ಹೆಚ್ಚಿಸಲು, ಜೈವಿಕ ವೈವಿಧ್ಯತೆ ಮತ್ತು ಪರಿಸರ ಸಂರಕ್ಷಣೆಯನ್ನು ಕಾಪಾಡಲು, ಬಳಕೆ ಮತ್ತು ಲಾಭಹಂಚಿಕೆ ಒಪ್ಪಂದಗಳ ಮೂಲಕ, ಜೈವಿಕ ವೈವಿಧ್ಯ ಕಾಯ್ದೆ, 2002ರ ಸಂಬಂಧೀ ಕಾಯ್ದೆ ಮತ್ತು 2004ರ ನಿಯಮಗಳನ್ನು ಅನುಷ್ಠಾನಕ್ಕೆ ತರುವುದಾಗಿದೆ.

ಈ ಯೋಜನೆಯ ಬಳಕೆ ಮತ್ತು ಲಾಭಹಂಚಿಕೆ ಒಪ್ಪಂದಗಳ ಮೇಲೆ ಜಾಗತಿಕ ಪರಿಸರ ಸೌಲಭ್ಯದ ಅಡಿಯಲ್ಲಿ ಮೊದಲ ರಾಷ್ಟ್ರೀಯ ಯೋಜನೆಯಾಗಿದೆ ಮತ್ತು ಭಾರತದ ಹತ್ತು ರಾಜ್ಯಗಳಲ್ಲಿ ಅಂದರೆ ಆಂಧ್ರ ಪ್ರದೇಶ ಗುಜರಾತ್, ಹಿಮಾಚಲ ಪ್ರದೇಶ, ಸಿಕ್ಕಿಂ, ಪಶ್ಚಿಮ ಬಂಗಾಳ, ಗೋವಾ, ಕರ್ನಾಟಕ, ಒಡಿಶಾ, ತೆಲಂಗಾಣ, ಮತ್ತು ತ್ರಿಪುರದಲ್ಲಿ ಅಳವಡಿಸಲಾಗಿದೆ.

ಈ ಯೋಜನೆಯು ಕರ್ನಾಟಕ ರಾಜ್ಯ ಜೀವವೈವಿಧ್ಯ ಮಂಡಳಿಯ, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಅಧಿಕಾರಿಗಳ ಸಹಯೋಗದೊಂದಿಗೆ, ಮತ್ತು ಇತರ ಸಂಬಂಧೀ ಸಂಸ್ಥೆಗಳಾದ ಭಾರತೀಯ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಸರ್ವೇಕ್ಷಣೆ, ಸಂಯುಕ್ತ ರಾಷ್ಟ್ರ ಪರಿಸರ ಕಾರ್ಯಕ್ರಮ–ಪರಿಸರ ಕಾನೂನು ಒಡಂಬಡಿಕೆ ವಿಭಾಗ, ಅಂತರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ, ಸಂಯುಕ್ತ ರಾಷ್ಟ್ರ ವಿಶ್ವವಿದ್ಯಾನಿಲಯ ಉನ್ನತ ಅಧ್ಯಯನ ಸಂಸ್ಥೆ ಮತ್ತು ಜಾಗತಿಕ ಪರಿಸರ ಸೌಲಭ್ಯ ಇವುಗಳ ಸಹಕಾರದೊಡನೆ ಕಾರ್ಯಗತಗೊಳಿಸಲಾಗುತ್ತದೆ.

## ಯೋಜನೆಯ ಮುಖ್ಯ ಘಟಕಗಳು:

1. ಜೈವಿಕ ವೈವಿಧ್ಯತೆ ಇರುವ ಕಾಡು, ಸಾಗುವಳಿ ಭೂಮಿ ಮತ್ತು ನೀರಾವರಿ ಕ್ಷೇತ್ರವನ್ನು ಗುರುತಿಸುವುದು ಮತ್ತು ಬಳಕೆ–ಲಾಭಹಂಚಿಕೆ ಆಧಾರದಲ್ಲಿ ಅವುಗಳ ಮೌಲ್ಯಮಾಪನೆ.
2. ಜೈವಿಕ ವೈವಿಧ್ಯ ಕಾಯಿದೆಯಡಿಯಲ್ಲಿ ಬಳಕೆ–ಲಾಭಹಂಚಿಕೆ ನಿಬಂಧನೆಗಳನ್ನು ವ್ಯವಸ್ಥಿತ ಕಾನೂನು ಉಪಕರಣಗಳನ್ನು, ವಿಧಾನಗಳನ್ನು, ಮಾರ್ಗದರ್ಶಿ ಚೌಕಟ್ಟುಗಳನ್ನು ಅಭಿವೃದ್ಧಿಗೊಳಿಸುವಿಕೆ.
3. ಬಳಕೆ ಮತ್ತು ಲಾಭಹಂಚಿಕೆಯ ಅನ್ವಯ ಪ್ರಾಯೋಗಿಕ ಒಪ್ಪಂದದ ಚಟುವಟಿಕೆಗಳು.
4. ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಬಳಕೆ–ಲಾಭಹಂಚಿಕೆ ನಿಬಂಧನೆಗಳು, ನೀತಿ–ನಿಯಂತ್ರಣ ಚೌಕಟ್ಟುಗಳು, ಮುಂತಾದವುಗಳ ಅನುಷ್ಠಾನ, ಮತ್ತು ಇದರಿಂದ ಅಂತರಾಷ್ಟ್ರೀಯ ಮಟ್ಟದ ಬಳಕೆ–ಲಾಭಹಂಚಿಕೆ ಒಪ್ಪಂದಗಳ ನೀತಿಗಳಿಗೆ ಸಾಧ್ಯವಾದಷ್ಟು ಕೊಡುಗೆ.
5. ಸಾಮರ್ಥ್ಯ ವರ್ಧನೆ, ಜೈವಿಕ ವೈವಿಧ್ಯ ಕಾನೂನಿನ ಬಳಕೆ ಮತ್ತು ಲಾಭಹಂಚಿಕೆಯ ನಿಬಂಧನೆಗಳನ್ನು ಶಕ್ತಿಯುತವನ್ನಾಗಿ ಮಾಡುವುದು.
6. ಸಾರ್ವತ್ರಿಕ ಜಾಗೃತಿ ಹೆಚ್ಚಿಸುವುದು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು.


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

# ಕರ್ನಾಟಕ ಜೀವವೈವಿಧ್ಯ ಮಂಡಳಿ

ನೆಲಮಹಡಿ, ವನವಿಕಾಸ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003, ಕರ್ನಾಟಕ, ಭಾರತ

ದೂರವಾಣಿ: 080–23448783, ಫ್ಯಾಕ್ಸ್ : 080–23440535 ಇ–ಮೇಲ್: kbb-ka@nic.in



**ಛಾಯ ಚಿತ್ರ ಕೃಪೆ:**

ಅರವಿಂದ್ ಮಧ್ಯಸ್ಥ ಎನ್ ಎ, ಗೀತಾ ನಾಯಕ್, ಮಹೇಶ್ ಎಸ್ ದೊಡ್ಡಮನಿ, ಪ್ರಭುದೇವ ಕೆ ಎಸ್, ರಮ್ಯ ರವಿ, ಶ್ರೀನಿವಾಸ್ ವೆಂಕಟ್, ವೀಣಾ ಪಿ ಜಿ, ವೀಣಾ ಎ ರಾಮಕೃಷ್ಣ, ವಿದ್ಯಾ ಪ್ರದೀಪ್ ಕುಮಾರ್, ವಿವೇಕ್ ಪಾಟೀಲ್



**ವಿಶೇಷ ಟಿಪ್ಪಣಿ:**

ಈ ಪುಸ್ತಕದಲ್ಲಿ ಒದಗಿಸಿದ ಮಾಹಿತಿಯನ್ನು ಸಾರ್ವಜನಿಕರ ಸಾಮಾನ್ಯ ಮಾಹಿತಿಗಾಗಿ ವಿನ್ಯಾಸಗೊಳಿಸಲಾಗಿದ್ದು, ಇದು ಕಾನೂನು ದಾಖಲೆಯಾಗಿ ಬಳಸಲಾಗುವುದಿಲ್ಲ. ಕಾನೂನಾತ್ಮಕ ಉದ್ದೇಶಗಳಿಗಾಗಿ ದಯವಿಟ್ಟು ಸೂಕ್ತ ಕಾನೂನುಗಳು/ಮಾರ್ಗದರ್ಶನಗಳು/ನಿಯಮಗಳನ್ನು ಉಲ್ಲೇಖಿಸಿ.


print@paramountcolor.com, Ph: 23100666